CW.2 PW.2

<u>ಮುಂದುವರಿದ ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-</u>

ಈ ದಿನ ದಿನಾಂಕಃ 01.09.2025. ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ನಾನು ಹಾಗೂ ನನ್ನ ಅಜ್ಜಿ ಬೃಂದಾವನ ಕಡೆಗೆ ಹೋಗುತ್ತಿದ್ದೆವು. ಅಲ್ಲಿ ಬೈರವೇಶ್ವರ ರಾಜು ಇವರ ಮನೆಯ ಬಳಿ ಮಹಾರಾಜರ ಕಟ್ಟೆ ಬೈಪಾಸ್ ಕಡೆಯಿಂದ ಒಂದು ಕಾರು ಬಂದಿರುತ್ತದೆ. ಅದು ವೇಗವಾಗಿ ಬಂದು ಗುದ್ದಿದ ಕಾರಣ ನಾನು ನನ್ನ ಅಜ್ಜಿ ಕೆಳಗೆ ಬಿದ್ದಿರುತ್ತೇವೆ . ನನಗೆ ಬಲಗೈ ಮತ್ತು ಸೊಂಟ ಹಾಗೂ ಎಡಗಾಲಿಗೆ ಗಾಯವಾಗಿರುತ್ತದೆ. ಅಜ್ಜಿಗೆ ತಲೆಗೆ ಪೆಟ್ಟು ಬಿದ್ದಿರುತ್ತದೆ. ನಂತರ ಸಾರ್ವಜನಿಕರ ಸಹಾಯದಿಂದ ಕನಕ ಆಸ್ಪತ್ರೆ ನರ್ಸಿಂಗ್ ಹೋಂ ಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿಂದ ಹೆಚ್ಚಿ ನ ಚಿಕಿತ್ಸೆಗೆ ಎಂದು ನಿಮಾನ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ನನ್ನ ಅಜ್ಜಿಯ ಮಗನಾದ ಅಭಿ ಕರೆ ಮಾಡಿ ಅವರು ತೀರಿಕೊಡಿರುತ್ತಾರೆ ಎಂದು ಹೇಳಿರುತ್ತಾರೆ. ಆಗ ಸುಮಾರು 5.45 ಗಂಟೆ ಆಗಿರುತ್ತದೆ. ನಂತರ ನಾನು 7-30 ಗಂಟೆಗೆ ಈ ಬಗ್ಗೆ ದೂರು ಕೊಟ್ಟಿರುತ್ತೇನೆ. ನಂತರ ದಿನಾಂಕಃ 20.03.2022 ರಲ್ಲಿ ಪೋಲಿಸರು ಸ್ಥಳಕ್ಕೆ ಬಂದು ಮಹಜರ್ ಮಾಡಿರುತ್ತಾರೆ. ಆಗ ಸಮಯ 4-45 ಗಂಟೆ ಯಿಂದ 5.30 ಗಂಟೆ ಆಗಿದ್ದು , ನನ್ನ ಜೊತೆ ಮಹಜರ್ ಸಂದರ್ಭದಲ್ಲಿ ಚಾ.ಸ. 2 ಮತ್ತು 3 ರವರು ಹಾಜರಿದ್ದರು. ನಂತರ ಈ ಬಗ್ಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಗುರುತಿಸಿದ್ದು, ಅದನ್ನು ಈಗ ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2 ಎ ಎಂದು ಗುರುತಿಸಲಾಯಿತು. ಅದೇ ರೀತಿ ಮಹಜರ್ ಸಮಯದಲ್ಲಿ ಒಂದು ತೆಗೆದ ಪೋಟೊವನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಸದರಿ ಪೋಟೊವನ್ನು ನಿ.ಪಿ. 3 ಎಂದು ಗುರುತಿಸಲಾಯಿತು.

CW.2 PW.2

ಸಾಕ್ಷಿಯು ಪೋಲಿಸರ ವಾಹನಗಳನ್ನು ಅಮಾನತ್ತು ಮಾಡುವ ಸಂದರ್ಭದಲ್ಲಿ ತಾನು ಹಾಜರಿರುವುದಾಗಿ ನುಡಿಯುತ್ತಾರೆ. ಸಾಕ್ಷಿಗೆ ಸದರಿ ಅಮಾನತ್ತು ಪಂಚನಾಮೆ ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿ.ಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.4ಎ ಎಂದು ಗುರುತಿಸಲಾಯಿತು. ಸದರಿ ಮಹಜರ್ ಅನ್ನು ಯಾವ ಸಮಯದಲ್ಲಿ ಮಾಡಲಾಗಿತ್ತು ಎಂದು ಈಗ ನೆನಪಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ವಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ವಾಟೀ ಸವಾಲುಃ ಸ. ಸ. ಅ. ರವರಿಂದ**

ನಾನು ದಿನಾಂಕ 23.03.2022 ರಂದು ಅಮಾನತ್ತು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಅದನ್ನು ಸಂಜೆ 5.30 ಯಿಂದ 6 ಗಂಟೆವರೆಗೂ ಮಾಡಲಾಗಿತ್ತು ಎಂದರೆ ಸರಿ. ನನ್ನ ಜೊತೆ ಸದರಿ ದಿನ 11 ಜನರು ಇದ್ದರು ಎಂದರೆ ಸರಿ.

**ವಾಟೀ ಸವಾಲುಃ ಆರೋಪಿ ಪರ ವಕೀಲರು ವಾಟೀಸವಾಲಿಗೆ ಸಮಯ ಕೋರಿದ್ದು ಕಾಲಾವಕಾಶ ನೀಡಲಾಯಿತು.**

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**Sd/-**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**